ಸನ್ನಿಧಿಯಲ್ಲಿ ಪ್ರತ್ಯಕ್ಷವಾಗಿರುತ್ತೀಯ...' ಎಂದು ತುಟಿಯಂಚಿನಲ್ಲಿ ನಕ್ಕಿದ್ದ. ಪ್ರತಿಕೂಲ ಹವಾಮಾನದಿಂದಾಗಿ ವಿಮಾನ ಎರಡು ಗಂಟೆಗಳ ಕಾಲ ವಿಳಂಬವಾಗಿ ಟೇಕಾಫ್ ಆಗುತ್ತಿತ್ತು. ಗಗನಸಖಿ ಮಂದಸ್ಮಿತಳಾಗಿ ವಿಮಾನದ ಬಾಗಿಲಲ್ಲಿ ನಿಂತು ಸ್ವಾಗತಿಸಿದ್ದಳು. ಸುಮಧುರ ಸುವಾಸನೆಯನ್ನು ಹರಡುತ್ತಾ ಅಪೂರ್ವ ಸುಂದರಿ ಡಾಕ್ಟರ್ ಪೆದ್ದಚೆರುವು ನೀಲಾಂಜನ ಕಿಟಕಿಯ ಪಕ್ಕದ ಸೀಟನ್ನು ನನಗೆ ತೋರಿ ತಾನು ನನ್ನ ಪಕ್ಕದ ಸೀಟಿನಲ್ಲಿ ಕುಳಿತಿದ್ದಳು. ನನ್ನ ಮುಖದಲ್ಲಿ ಮೂರ್ತಗೊಂಡಿದ್ದ ಗಾಬರಿಯನ್ನು ನೀಲಾಂಜನಾಳ ತೀಕ್ಷ್ಣವಾದ ಕಣ್ಣುಗಳು ಗ್ರಹಿಸಿದ್ದವು.

'ಈ ಬ್ರಹ್ಮಾಂಡ ತಾನು ಸೃಷ್ಟಿಯಾದಾಗಿನಿಂದಲೂ ಅಂದರೆ ಅನೇಕ ಕೋಟಿ ವರ್ಷಗಳಿಂದಲೂ ಅವಿರತವಾಗಿ ಸಮತೋಲನದಿಂದ ಚಲಿಸಲು ಯಾವುದೋ ಅಗೋಚರವಾದ ಒಂದು ಘನತರವಾದ ಶಕ್ತಿಯನ್ನು ತನ್ನಿಂದಲೇ ಸೃಷ್ಟಿಸಿಕೊಂಡಿರುವುದು ಜೀವಜಗತ್ತಿಗೆ ಗೋಚರವಾಗದ ಅಚ್ಚರಿಯ ಮತ್ತು ಅದ್ಭುತ ಸಂಗತಿ. ಬ್ರಹ್ಮಾಂಡವೂ ಒಳಗೊಂಡಂತೆ ಅಸಂಖ್ಯಾತ ನಕ್ಷತ್ರ ಪುಂಜಗಳು, ಗ್ರಹಗಳು, ಕೊನೆಯೇ ಇಲ್ಲದೆ ಅಗಾಧವಾಗಿ ಹರಡಿಕೊಂಡಿರುವ ಶೂನ್ಯ; ಈ ಎಲ್ಲವುಗಳೂ ಹೇಗೆ, ಯಾವಾಗ ಮತ್ತು ಏಕೆ ಸೃಷ್ಟಿಯಾದವೆಂದು ನಂಬಿಸಲು ಲಭ್ಯವಿರುವ ಎಲ್ಲಾ ಆಧಾರಗಳು, ತರ್ಕಗಳು, ದಾಖಲೆಗಳು, ಸಿದ್ಧಾಂತಗಳು ಖಂಡಿತವಾಗಿಯೂ ನಿಖರವಾದವುಗಳಲ್ಲ ಮತ್ತು ಸತ್ಯವಾದವುಗಳೂ ಅಲ್ಲ. ಜೀವ ಜಗತ್ತು ಚಿಸಿಲೊಡೆದು ಕೋಟ್ಯಂತರ ವರ್ಷಗಳಾಗಿದ್ದರೂ ಮನುಷ್ಯನಿಂದ ಹಿಡಿದು ಎಲ್ಲಾ ಪ್ರಾಣಿಗಳಿಗೂ ಹುಟ್ಟಿಗಿಂತ ಮೊದಲಿನ ಮತ್ತು ಸಾವಿನ ನಂತರದ ಸ್ಥಿತಿಗಳ ಬಗ್ಗೆ ಲವಲೇಶವೂ ತಿಳಿಯದಿರುವುದೇ ನಮ್ಮ ಮುಂದಿರುವ ಬಿಡಿಸಲಾರದ ಅತ್ಯಂತ ದೊಡ್ಡ ರಹಸ್ಯ ಮತ್ತು ಪ್ರಶ್ನೆ. ಹಾಗಾಗಿ ನಾವು ಸಾವಿಗೆ ಭಯಪಡುವುದೇನೂ ಬೇಕಿಲ್ಲವೆನಿಸುತ್ತದೆ...' ವಿಮಾನದ ಸೀಟ್ ಬೆಲ್ಟನ್ನು ಅತ್ಯಂತ ಸಲೀಸಾಗಿ ಕಟ್ಟಿಕೊಳ್ಳುತ್ತಾ ನೀಲಾಂಜನ ನುರಿತ ತತ್ವಜ್ಞಾನಿಯಂತೆ ಹೇಳಿದ್ದಳು. ಎಷ್ಟಾದರಾಗಲಿ ನೀಲಾಂಜನ ಭೌತಶಾಸ್ತ್ರ ಮತ್ತು ಪ್ರಾಣಿಶಾಸ್ತ್ರ ಎರಡರಲ್ಲೂ ಆಳವಾದ ಅಧ್ಯಯನ ನಡೆಸಿ ಡಾಕ್ಟರೇಟ್ ಪದವಿಯನ್ನು ಪಡೆದುಕೊಂಡಿದ್ದವಳು. ನಾನು ಎಂ.ಎ. ಅರ್ಥಶಾಸ್ತ್ರ ಪಾಸು ಮಾಡಿ ಆರ್ಥಿಕ ನೀತಿ ಮತ್ತು ಮಾರುಕಟ್ಟೆಗಳ ಬಗ್ಗೆ ವಿಶೇಷ ಅಧ್ಯಯನ ನಡೆಸಿ ಡಾಕ್ಟರೇಟ್ ಪಡೆದುಕೊಂಡವನು. ಬೆಲ್ಟ್ ಕಟ್ಟಿಕೊಳ್ಳಲು ತಡಕಾಡುತ್ತಿದ್ದ ಮತ್ತು ಮುಖದಲ್ಲಿ ಭಯ ತುಂಬಿಕೊಂಡಿದ್ದ ನನ್ನನ್ನು ಕಂಡು ಗಗನಸಖಿ ತಾನೇ ನನ್ನ ಬೆಲ್ಟ್ ಕಟ್ಟುತ್ತಾ, 'ಇದೇ ಮೊದಲ ಸಲವಾ? ಭಯ ಬೀಳೋದೇನೂ ಬೇಡ. ನಾವು ನೋಡಿ, ಪ್ರತಿನಿತ್ಯ ಆಕಾಶದಲ್ಲಿಯೇ ಅಲೆಯುತ್ತಿರುತ್ತೇವೆ. ಇಷ್ಟಕ್ಕೂ ಇಂಥ ಅಪ್ಸರೆಯಂಥ ಅಪೂರ್ವ ಸುಂದರಿಯನ್ನು ಪಕ್ಕದಲ್ಲಿಟ್ಟುಕೊಂಡು ನಗುತ್ತಲೇ ನೀವು ನರಕವನ್ನಾದರೂ ಪ್ರವೇಶಿಸಬಹುದು...' ಎಂದು ಪಕ್ಕದಲ್ಲಿ ಕುಳಿತಿದ್ದ ನೀಲಾಂಜನಾಳನ್ನು ನೋಡಿ ನಕ್ಕಿದ್ದಳು. ಅವಳ ನಗು ಮತ್ತು ನೀಲಾಂಜನಾಳ ಸುಮಧುರ ಪರಿಮಳ ನನ್ನ ಭಯವನ್ನು ಬಚ್ಚಿಟ್ಟುಕೊಂಡಿದ್ದವು.

'ವಿಮಾನಕ್ಕೂ ಜೀವವಿದೆ...' ನೀಲಾಂಜನ ನನ್ನ ಕಿವಿಯಲ್ಲಿ ಹೇಳುವುದರೊಂದಿಗೆ ವಿಮಾನ ಟೇಕಾಫ್ ಆಗಿತ್ತು.

'ಅಂದರೆ...' ವಿಮಾನದ ಕಿಟಕಿಯಿಂದ ಹೊರಗೆ ದೃಷ್ಟಿನೆಟ್ಟು ಕೇಳಿದ್ದೆ. ಬೆಳಕಿನ ಸಮುದ್ರದಿಂದ ಹಕ್ಕಿಯೊಂದು ಮೇಲಕ್ಕೆ ಜಿಗಿಯುತ್ತಿರುವಂತೆ ವಿಮಾನದ ಟೇಕಾಫ್ ಪ್ರಕ್ರಿಯೆ ಭಾಸವಾಗಿತ್ತು ನನಗೆ. ಬೆಳಕಿನ ಸೌಂದರ್ಯ ರಾರಾಜಿಸುವುದು ರಾತ್ರಿಯಲ್ಲಿಯೇ.